# ವಿಡಿಐಟಿ ವಿದ್ಯಾರ್ಥಿಗಳ ಪ್ರಾಜೆಕ್ಟ್‌ಗಳಿಗೆ ಧನಸಹಾಯ

## ಶಿಕ್ಷಕರ ಮಾರ್ಗದರ್ಶನದಲ್ಲಿ ತಯಾರಾದ ಐದು ಪ್ರಾಜೆಕ್ಟ್‌ಗಳಿಗೆ ರಾಜ್ಯ ವಿಜ್ಞಾನ-ತಂತ್ರಜ್ಞಾನ ಮಂಡಳಿ ಉತ್ತೇಜನ

■ **ಉದಯವಾಣಿ ಸಮಾಚಾರ**




**ಹಳಿಯಾಳ:** ಇಲ್ಲಿನ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಐದು ಪ್ರಾಜೆಕ್ಟ್‌ಗಳಿಗೆ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ (ಕೆಎಸ್‌ಸಿಎಸ್‌ಟಿ) ಧನಸಹಾಯ ನೀಡಿದೆ.

ವಿದ್ಯಾರ್ಥಿಗಳ ಯೋಜನಾ ಕಾರ್ಯಗಳಿಗೆ ಪ್ರಾಯೋಜಕತ್ವ ನೀಡುವ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯ 47 ನೇ ಆವೃತ್ತಿಯಡಿ ಧನಸಹಾಯ ಲಭಿಸಿದೆ. ಸಿವಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರೊ।ಸೀಮಾ ಬಸರಿಕಟ್ಟಿ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಕೈಗೊಂಡಿರುವ 'ಗ್ರಾಫೈನ್ ಆಕ್ಸೈಡ್ ಬಳಸಿ ಕಾರವಾರ ಭಾಗದಲ್ಲಿ ಕಲುಷಿತಗೊಂಡ ಅಂತರ್ಜಲ ಸರಿಪಡಿಸುವುದು', ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳು ಡಾ। ಪೂರ್ಣಿಮಾ ರಾಯ್ಕರ್ ಹಾಗೂ ಡಾ। ವೆಂಕಟೇಶ್ ಶಂಕರ್ ಮಾರ್ಗದರ್ಶನದಲ್ಲಿ ಕೈಗೊಂಡಿರುವ 'ವಾಯು ಗುಣಮಟ್ಟ ಗ್ರಹಿಕೆ ಹಾಗೂ ಮೇಲ್ವಿಚಾರಣೆ ಯೋಜನೆಗೆ ಧನ ಸಹಾಯ ದೊರೆತಿದೆ.

ಪ್ರೊ। ನಿಖಿಲ್ ಕುಲಕರ್ಣಿ ಮಾರ್ಗದರ್ಶನದಲ್ಲಿ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ ವಿಭಾಗದ ವಿದ್ಯಾರ್ಥಿಗಳ 'ಸ್ಮಾರ್ಟ್ ಮೆಡಿಕೇಶನ್ ಡಿಸ್ಪೆನ್ಸರ್ ಆ್ಯಂಡ್ ರಿಮೈಂಡರ್ ಯುಸಿಂಗ್ ಎಂಬೆಡ್ಡೆಡ್ ಸಿಸ್ಟಮ್', ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಡಾ।ಗುರುರಾಜ್ ಹತ್ತಿ ಮತ್ತು ಡಾ। ಶಂಕರ್ ಬಡಿಗೇರ್ ಅವರ ಮಾರ್ಗದರ್ಶನದಲ್ಲಿ 'ಗ್ರೀನ್ ಮೆಟಲ್ ಮ್ಯಾಟ್ರಿಕ್ಸ್ ಕಾಂಪೋಸಿಟ್: ರೀ ಪರ್ಪೋಸಿಂಗ್ ಡೆಬ್ರಿಸ್ ಫಾರ್ ಎಂಜಿನಿಯರಿಂಗ್ ಪರ್ಪಸ್' ಮತ್ತು 'ಪರ್ಫಾರ್ಮೆನ್ಸ್ ಇವ್ಯಾಲ್ಯುಯೇಷನ್ ಆಫ್ ಪೋರ್ಟೆಬಲ್ ಸೋಲಾರ್ ವೆಜಿಟೇಬಲ್ ಡ್ರೈಯರ್' ಈ ಎಲ್ಲಾ ಪ್ರಾಜೆಕ್ಟ್ ಗಳಿಗೆ ಕೆ ಎಸ್ ಸಿ ಎಸ್ ಟಿ ಧನ ಸಹಾಯ ನೀಡಿದೆ.

ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳ ಪ್ರಾಜೆಕ್ಟ್ ಗಳಿಗೆ ರಾಜ್ಯ ಸರ್ಕಾರದ ಅಂಗಸಂಸ್ಥೆ ಕೆಎಸ್‌ಸಿಎಸ್‌ಟಿಯು ಧನ ಸಹಾಯ ನೀಡಿರುವುದಕ್ಕೆ ಆಡಳಿತ ಮಂಡಳಿ ಅಧ್ಯಕ್ಷ ವಿನಾಯಕ ಲೋಕುರ್, ಪ್ರಾಚಾರ್ಯ ಡಾ। ವಿ.ಎ. ಕುಲಕರ್ಣಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ। ಮಹೇಂದ್ರ ದೀಕ್ಷಿತ್, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ। ಶ್ರೀನಿವಾಸ ದೇಶಪಾಂಡೆ, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ। ಮುರುಗಯ್ಯ ಎಸ್ ಬಿ , ಸಿವಿಲ್ ವಿಭಾಗದ ಮುಖ್ಯಸ್ಥ ಡಾ।ಆಶಿಕ್ ಬಳ್ಳಾರಿ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಸಂತಸ ವ್ಯಕ್ತಪಡಿಸಿದ್ದಾರೆ.

# ವಿಡಿಐಟಿ ವಿದ್ಯಾರ್ಥಿಗಳ ಪ್ರಾಜೆಕ್ಟ್‌ಗಳಿಗೆ ಧನಸಹಾಯ

**ಹಳಿಯಾಳ:** ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು (ಕೆಎಸ್‌ಸಿಎಸ್‌ಟಿ) ಪಟ್ಟಣದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಐದು ಪ್ರಾಜೆಕ್ಟ್‌ಗಳಿಗೆ ಧನಸಹಾಯ ನೀಡಿದೆ.

ಕೆಎಸ್‌ಸಿಎಸ್‌ಟಿಯ 47ನೇ ಆವೃತ್ತಿಯ ವಿದ್ಯಾರ್ಥಿಗಳ ಯೋಜನಾ ಕಾರ್ಯಗಳಿಗೆ ಪ್ರಾಯೋಜಕತ್ವ ನೀಡುವ ಈ ಕಾರ್ಯಕ್ರಮಕ್ಕೆ ಸಿವಿಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಪ್ರೊ. ಸೀಮಾ ಬಸರಿಕಟ್ಟಿ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಕೈಗೊಂಡಿರುವ ಗ್ರಾಫೈನ್ ಆಕ್ಸೈಡ್ ಬಳಸಿ ಕಾರವಾರ ಭಾಗದಲ್ಲಿ ಕಲುಷಿತಗೊಂಡ ಅಂತರ್ಜಲವನ್ನು ಸರಿಪಡಿಸುವುದು, ಕಂಪ್ಯೂಟರ್ ಸೈನ್ಸ್ ವಿಭಾಗದ ವಿದ್ಯಾರ್ಥಿಗಳು ಡಾ. ಪೂರ್ಣಿಮ ರಾಯ್ಕರ್ ಹಾಗೂ ಡಾ. ವೆಂಕಟೇಶ್ ಶಂಕರ್ ಮಾರ್ಗದರ್ಶನದಲ್ಲಿ ಕೈಗೊಂಡಿರುವ ವಾಯು ಗುಣಮಟ್ಟ ಗ್ರಹಿಕೆ ಹಾಗೂ ಮೇಲ್ವಿಚಾರಣೆ, ಪ್ರೊ. ನಿಖಿಲ್ ಕುಲಕರ್ಣಿ ಮಾರ್ಗದರ್ಶನದಲ್ಲಿ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಶನ್ ವಿಭಾಗದ ವಿದ್ಯಾರ್ಥಿಗಳ ಸ್ಮಾರ್ಟ್ ಮೆಡಿಕೇಶನ್ ಡಿಸ್ಪೆನ್ಸರ್ ಅಂಡ್ ರೇಮೈಂಡರ್ ಯುಸಿಂಗ್ ಎಂಬೆಡ್ಡೆಡ್ ಸಿಸ್ಟಮ್, ಮೆಕ್ಯಾನಿಕಲ್ ವಿಭಾಗದ ವಿದ್ಯಾರ್ಥಿಗಳು ಡಾ. ಗುರುರಾಜ್ ಹತ್ತಿ ಮತ್ತು ಡಾ. ಶಂಕರ್ ಬಡಿಗೇರ್ ಅವರ ಮಾರ್ಗದರ್ಶನದಲ್ಲಿ ಗ್ರೀನ್ ಮೆಟಲ್ ಮ್ಯಾಟ್ರಿಕ್ಸ್ ಕಾಂಪೋಸಿಟ್ : ರೀ ಪರ್ಪೋಸಿಂಗ್ ಡೆಬ್ರಿಸ್ ಫಾರ್ ಎಂಜಿನಿಯರಿಂಗ್ ಪರ್ಪಸ್ ಮತ್ತು ಪರ್ಫಾರ್ಮೆನ್ಸ್ ಇವ್ಯಾಲ್ಯೂಯೇಷನ್ ಆಫ್ ಪೋರ್ಟೆಬಲ್ ಸೋಲಾರ್ ವೆಜಿಟೇಬಲ್ ಡ್ರೈಯರ್ ಈ ಎಲ್ಲಾ ಪ್ರಾಜೆಕ್ಟ್‌ಗಳು ಆಯ್ಕೆಯಾಗಿವೆ. ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳ ಪ್ರಾಜೆಕ್ಟ್‌ಗಳಿಗೆ ರಾಜ್ಯ ಸರ್ಕಾರದ ಅಂಗ ಸಂಸ್ಥೆ ಕೆ ಎಸ್ ಸಿ ಎಸ್ ಟಿ ಯು ಧನ ಸಹಾಯ ನೀಡಿರುವುದಕ್ಕೆ ಆಡಳಿತ ಮಂಡಳಿಯ ಅಧ್ಯಕ್ಷ ವಿನಾಯಕ ಲೋಕುರ್ , ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ವಿದ್ಯಾರ್ಥಿ ಮತ್ತು ಮಾರ್ಗದರ್ಶಕರನ್ನು ಅಭಿನಂದಿಸಿದ್ದಾರೆ.

ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ಶ್ರೀನಿವಾಸ ದೇಶಪಾಂಡೆ, ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥ ಡಾ. ಮುರುಗಯ್ಯ ಎಸ್ ಬಿ , ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಆಶಿಕ್ ಬಳ್ಳಾರಿ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಸಂತಸ ವ್ಯಕ್ತಪಡಿಸಿದ್ದಾರೆ.